## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ 18.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | ಸತ್ಯ ಪ್ರತಿಜ್ಞೆಯ ಮೇರೆಗೆ |
|---|---|

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀಮತಿ ಪಿ ಎಂ ಪಿ ರವರಿಂದ

ಮೃತ ವಾದಿ ನಾಗರಾಜು ರವರು ನಿಮಗೆ ತಮ್ಮನಾಗಬೇಕು ಎಂದರೆ ಸರಿ. ನಾಗರಾಜು ರವರು ಉದ್ದೆಹೊಸಗೆರೆಯ ಗಂಗಮಣಿ ಅಲಿಯಾಸ್ ಗಂಗಾಣಮ್ಮ ರವರನ್ನು ಮೊದಲು ಮದುವೆಯಾಗಿದ್ದರು ಎಂದರೆ ಸರಿ. ಸದರಿಯವರಿಗೆ ಹರ್ಷಿತಾ ಮತ್ತು ಹೇಮಂತ್ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಹೇಮಂತ್ ರವರು 2009 ರಲ್ಲಿ ಖಾಯಿಲೆಯಿಂದ ಮೃತರಾಗಿರುತ್ತಾರೆ ಎಂದರೆ ಸರಿ. ಹರ್ಷಿತಾ ರವರು ಕೂಡ ದಿಃ 18.08.2010 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ಗಂಗಾಣಮ್ಮ ರವರು ದಿಃ 24.03.2012 ರಂದು ಮೃತರಾಗಿರುತ್ತಾರೆ ಎಂದರೆ ಸರಿ. ನಾಗರಾಜು ರವರ ಮದುವೆಯಾದಾಗ ನಿಮ್ಮ ತಂದೆಯ ಮನೆಯಲ್ಲಿ ಮದುವೆಯಾದ 6 ತಿಂಗಳ ನಂತರ ನಾಗರಾಜು ರವರನ್ನು ಮನೆಯಿಂದ ಹೊರಹಾಕಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಯ ಮನೆಯಲ್ಲೆಯೇ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಾಗರಾಜು ರವರು ಮಾರಶೆಟ್ಟಿಹಳ್ಳಿ ಗ್ರಾಮದಲ್ಲಿ ಬೇರೆ ಮನೆ ಕಟ್ಟಿಕೊಂಡು ವಾಸವಾಗಿದ್ದರು ಮತ್ತು ನಿಮ್ಮ ತಂದೆಯ ಮನೆಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಾಗರಾಜು ರವರು ತೀರಿ ಹೋಗುವ ತನಕ ಮೇಲ್ಕಂಡ ಬೇರೆ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾಗರಾಜು ರವರು ನಿಮ್ಮ ತಂದೆಯ ಮನೆಯಲ್ಲಿಯೇ ವಾಸವಾಗಿದ್ದರು ಎಂದು ತೋರಿಸುವ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾಗರಾಜು ರವರ ಹೆಂಡತಿ ಮತ್ತು ಮಕ್ಕಳು ತೀರಿಕೊಂಡಿದ್ದರಿಂದ ಸುಧಾಮಣಿ ರವರನ್ನು ಎರಡನೇ ಮದುವೆಯಾಗಿದ್ದರು ಎಂದರೆ ಸರಿಯಲ್ಲ. ಸದರಿಯವರ ಎರಡನೇ ಮದುವೆ ಸಮಯದಲ್ಲಿ ಅವರು ನಿಮ್ಮ ಬಳಿ ಬಂದು ಮದುವೆಗೆ ಬರುವಂತೆ ಕರೆದರೂ ಕೂಡ ನೀವು ಯಾರು ಕೂಡ ಸದರಿಯವರ ಮದುವೆಗೆ ಹೋಗಿಲ್ಲ ಎಂದರೆ ಸಾಕ್ಷಿಯು ಅವರು ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರಾದ ಸುಧಾಮಣಿ ರವರು ತುರುವೇಕೆರೆ ತಾಲ್ಲೂಕಿನ, ನಾಯಕನಘಟ್ಟದ ಶಂಕರಪ್ಪ ಮತ್ತು ಪವಿತ್ರ ರವರ ಮಗಳು ಎಂದರೆ ಸರಿಯಲ್ಲ. ಅವರು ತನ್ನ ಅಜ್ಜಿಯ ಜೊತೆ ತುರುವೆಕೆರೆ ತಾಲ್ಲೂಕಿನ ಮಂತ್ರಿಕೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರಾದ ಸುಧಾಮಣಿರವರು ಮಂತ್ರಿಕೇನಹಳ್ಳಿಯಲ್ಲಿ ತನ್ನ ಅಜ್ಜಿ ಜೊತೆ ವಾಸವಾಗಿದ್ದಕೊಂಡು ಲೋಕಮ್ಮನಹಳ್ಳಿಯಲ್ಲಿ ತನ್ನ ವಿದ್ಯಾಭ್ಯಾಸ ಮಾಡಿದ್ದರು ಎಂದರೆ ಸರಿಯಲ್ಲ. ಸುಧಾಮಣಿ ರವರು ಚಿಕ್ಕಪ್ಪ ಪ್ರಕಾಶ್ ಮತ್ತು ಚಿಕ್ಕಮ್ಮ ಪ್ರೇಮಾ ರವರು ನಿಮಗೆ ಗೊತ್ತು ಎಂದರೆ ಸರಿಯಲ್ಲ. ಸುಧಾಮಣಿ ರವರ ತಂದೆ ಮದುವೆ ಮಾಡಲಿಲ್ಲ ಎನ್ನುವ ಕಾರಣಕ್ಕೆ ಅವರ ಚಿಕ್ಕಪ್ಪ ಮತ್ತು ಚಿಕ್ಕಮ್ಮನಾದ ಪ್ರಕಾಶ್ ಮತ್ತು ಪ್ರೇಮಾ ರವರೇ ಸುಧಾಮಣಿ ಮತ್ತು ನಾಗರಾಜು ರವರ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ನಾಗರಾಜು ಮತ್ತು ಸುಧಾಮಣಿ ರವರ ಮದುವೆಯನ್ನು ಸಿದ್ದರ ಬೆಟ್ಟದಲ್ಲಿ ಮಾಡಿದ್ದು, ನಿಮ್ಮ ಊರಿನಿಂದ ಸಾಕಷ್ಟು ಜನ ಸದರಿಯವರ ಮದುವೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಪ್ರಭುದೇವ ರವರು ನಿಮ್ಮ ಚಿಕ್ಕಪ್ಪನ ಮಗ ಎಂದರೆ ಸರಿ. ಪ್ರಭುದೇವ ಮತ್ತು ಅವರ ಕುಟುಂಬದವರು ಸದರಿಯವರ ಮದುವೆಗೆ ಹೋಗಿ ಮದುವೆಯಾದ ನಂತರ ಸುಧಾಮಣಿ ಮತ್ತು ನಾಗರಾಜು ರವರನ್ನು ಮಾರಶೆಟ್ಟಿಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಮದುವೆಯಾಗಿ ಬಂದ ನಂತರ ನಾಗರಾಜು ರವರು ಮೊದಲು ವಾಸವಿದ್ದ ಬೇರೆ ಮನೆಯಲ್ಲಿಯೇ ನಾಗರಾಜು ಮತ್ತು ಸುಧಾಮಣಿ ರವರು ವಾಸವಾಗಿದ್ದರು ಎಂದರೆ ಸರಿಯಲ್ಲ.

ಅವರು ವಾಸವಿದ್ದ ಮನೆಯೂ ಹಳೆಯ ಮನೆಯಾಗಿತ್ತು ಎನ್ನುವ ಕಾರಣಕ್ಕೆ 2019 ರಲ್ಲಿ ಮಾರಶೆಟ್ಟಿಹಳ್ಳಿ ಗ್ರಾಮದಲ್ಲಿ ಹೊಸ ಮನೆಯನ್ನು ಕಟ್ಟಿದ್ದರು ಎಂದರೆ ಸರಿಯಲ್ಲ. ಆಗಲೂ ಕೂಡ ಅವರು ನಿಮ್ಮನೆಲ್ಲಾ ಕರೆದರೂ ಕೂಡ ನೀವ್ಯಾರೂ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣುತ್ತಿರುವ ವ್ಯಕ್ತಿ ನಿಮ್ಮ ತಮ್ಮ ನಾಗರಾಜು ಎಂದರೆ ಸರಿ. ಸದರಿ ಪೋಟೋದಲ್ಲಿ ಸಾಕ್ಷಿಯು ವಾದಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ.12 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಸದರಿ ಪೋಟೋಗೆ negative ಅನ್ನು ಹಾಜರುಪಡಿಸದೇ ಇರುವುದರಿಂದ ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ, ಆದರೆ ಸಾಕ್ಷಿಯೇ ಸದರಿ ಪೋಟೋದಲ್ಲಿ ಇರುವ ವ್ಯಕ್ತಿ ನಾಗರಾಜು ಎಂದು ಒಪ್ಪಿರುವುದರಿಂದ ಪ್ರತಿವಾದಿಯ ಪರ ವಕೀಲರ ತಕರಾರನ್ನು ತಿರಸ್ಕರಿಸಲಾಯಿತು. ನಿಪಿ.12 ರಲ್ಲಿ ನಾಗರಾಜು ರವರ ಪಕ್ಕದಲ್ಲಿ ಕಾಣುತ್ತಿರುವ ವ್ಯಕ್ತಿ ಸುಧಾಮಣಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪೋಟೋವನ್ನು ಸೃಷ್ಟಿ ಮಾಡಿ ತಂದಿದ್ದಾರೆ ಎಂದು ನುಡಿಯುತ್ತಾರೆ.

2. ವಾದಿ ನಾಗರಾಜು ರವರು ಯಾವಾಗ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮೊದಲನೇ ಬಾರಿ ಕೋರೋನಾ ರೋಗ ಆವರಿಸಿದಾಗ ತೀರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಖರವಾದ ದಿನಾಂಕ ಹೇಳಲು ಬರುತ್ತದಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾಗರಾಜು ರವರು ತೀರಿಕೊಳ್ಳುವ 2 ವರ್ಷ ಮೊದಲಿನಿಂದಲೂ ಗಂಟಲು ಕ್ಯಾನ್ಸರ್ ನಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ತನಗೆ ಗಂಟಲು ಕ್ಯಾನ್ಸರ್ ಇದ್ದ ಕಾರಣ ನಾಗರಾಜು ರವರು ಬೆಂಗಳೂರಿನ ಕಿದ್ವಾಯಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಕೂಡ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನಾಗರಾಜು ರವರನ್ನು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಅರ್ಜಿದಾರರಾದ ಸುಧಾಮಣಿ ರವರೇ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದರೂ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಹೆಸರು ಪರಮಶಿವಯ್ಯ ತಾಯಿಯ ಹೆಸರು ಗೌರಮ್ಮ ಎಂದರೆ ಸರಿ.

ನಾಗರಾಜು ರವರು ದಿಃ 18.04.2020 ರಂದು ತೀರಿಕೊಂಡಿದ್ದಾರೆ ಎಂದರೆ ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾಗರಾಜು ರವರು ತೀರಿಕೊಂಡಾಗ ನೀವು ಅದೇ ಊರಿನಲ್ಲಿ ಇದ್ದರೂ ಕೂಡ ಅವರ ಅಂತಿಮ ಸಂಸ್ಕಾರಕ್ಕೂ ಕೂಡ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ನಾಗರಾಜು ರವರು ತೀರಿಕೊಂಡಾಗ ನಮ್ಮ ಮನೆಯಲ್ಲಿಯೇ ಇದ್ದರು, ನಾವೇ ಅವರ ಅಂತಿಮ ಸಂಸ್ಕಾರ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಾಗರಾಜು ರವರ ಅಂತಿಮ ಸಂಸ್ಕಾರವನ್ನು ಯಾವ ದಿನಾಂಕದಂದು ಮಾಡಿದ್ದಾರೆ ಎಂದು ಹೇಳಲು ಅಗುತ್ತದಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.